ಶ್ರೀ ಎಸ್. ನಿಜಲಿಂಗಪ್ಪ.—ಪ್ರಿಂಟುಮಾಡಿದ ಕವರಿನೊಳಗೇನೇ ಇನ್ನೊಂದು ಕವರಿಟ್ಟು ಅದರೊಳಗೆ ಟಿಕ್ಸ್ ಹಾಕಿ ಕವರನ್ನು ಕಳಿಸುತ್ತಾರೆ. ಇದರ ಖರ್ಚಿನಲ್ಲಿ ಯಾವ ವಿಧವಾದ ಉಳಿತಾಯವೂ ಆಗುವುದಿಲ್ಲ ಮತ್ತು ಇದರಲ್ಲೇನೂ ಕಾಣಿಸುತ್ತಿಲ್ಲ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಕೆಲವು ಅವ್ಯವಹಾರಗಳು ಇಂತಹ ಪತ್ರಗಳಲ್ಲಿ ಬರಬಹುದು ಮತ್ತು ಇದನ್ನು ಅಧಿಕಾರಿಗಳು ದುರುಪಯೋಗಪಡಿಸಬಹುದು ಎನ್ನುವ ವಿಚಾರಗಳು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇದು ಮಾನ್ಯ ಸದಸ್ಯರ ಅತ್ಯಂತ ವಿಷಾದಪಡತಕ್ಕಂತಹ ಉಹಾಪೋಹ.

ಶ್ರೀ ಎರ್. ಎಸ್. ವೆಂಕಾಜೀರಾವ್.—ಕಾಗದ ಬರೆಯುವ ಹಾಗೇ 'ಕಾನ್‌ಫಿಡೆನ್‌ಷಿಯಲ್' ಎಂದು ಕವರಿನ ಮೇಲೆ ಬರೆದರೂ ಆಗುತ್ತದಲ್ಲವೇ ?

ಶ್ರೀ. ಎಸ್. ನಿಜಲಿಂಗಪ್ಪ.—ಇದು ಏನೋ ತಮ್ಮ ಅಭಿಪ್ರಾಯದ ಮಾತು.

Mr. CHAIRMAN.—Sri Keshava Rao Nitturkar is permitted to put question No. 58.

Karanja Project

Sri KESHAVA RAO NITTURKAR (Teachars' Constituency) [On behalf of SRI S. G. KHELGI (Local Authorities' Constituency)].—

Will the Minister for Public Works be pleased to state.—

(*a*) whether the Karanja Project of Bidar District is included in IV Plan ;

(*b*) if so, the estimated cost and the extent of land to be irrigated under this scheme ;

(*c*) when the above work will be taken up by the Government ?

A.—Sri VEERENDRA PATIL (Minister for Public Works).—

(*a*) Yes.

(*b*) Rs. 990 lakhs.
67,000 acres.

(*c*) On receipt of technical clearance from the Government of India and if funds permit.

SRI KESHAVA RAO NITTURKAR.—Is it not a fact that Karanja Project is the only medium and major irrigation project that could be undertaken in Bidar district ?

† Sri VEERENDRA PATIL.—Yes.

Sri KESHAVA RAO NITTURKAR.—Is it not a fact that since the last ten years, the people of Bidar have been demanding the taking up of this project as the only hope for the backward district of Bidar ?

†Indicates that the remarks or speeches have not been revised by the member concerned.

Sri VEERENDRA PATIL.—That is why our Department undertook the investigation and they have prepared the project report which has been forwarded to the Government of India.

Sri KESHAVA RAO NITTURKAR.—When it was sent to the Government of India and with what result, Sir ?

Sri VEERENDRA PATIL.— We have referred to the Government of India for technical clearance on 2-8-1967.

Sri KESHAVA RAO NITTURKAR.—Out of the estimated cost of this project, how much does the Government of Mysore expect to be shared by the Government of India, Sir ?

Sri VEERENDRA PATIL.—They are not financing any of our projects. We have to make provision in our own plan and we have to finance these projects.

Sri KESHAVA RAO NITTURKAR.—Is any concerted effort or attempt made by holding discussion at the Minister's or Chief Minister's level to secure technical clearance from the Government of India ?

Sri VEERENDRA PATIL.—We have already referred the matter to the Government of India and it may take some more time. We are going to remind them again in the matter.

CALLING ATTENTION NOTICE TO A MATTER OF URGENT PUBLIC IMPORTANCE.

Sri M. C. NARASIMHAN (Legislative Assembly Constituency).— Sir, I beg to draw the attention of the Minister for Labour to the continuance of the strike since 15th January 1968 by the workers of Sonalkar Factory at Harihar.

† Sri K. V. SHANKARA GOWDA (Minister for Agiculture and Education).— Sir, on behalf of the Hon'ble Minister for Animal Husbandry and Labour, I beg to furnish the following information :

The Harihar Taluk Small Scale Industries Employees Association, Harihar, issued a notice dated 10th Jaunary 1968 to the management of Sonalkar Tools Works, Harihar, protesting against the lay-off and stoppage of interim relief to the workers. This notice was followed up by a strike by the workers from 15th January 1968. The dispute was taken up in conciliation by the Labour Officer, Davanagere. During conciliation, the management represented that serious recession has set in in the Engineering Industry and that the same was explained to the workers two months earlier with the suggestions either to face retrenchment or lay-off or agree voluntarily to work for 5 days in a week. The workers agreed to work for 5 days in a week for two months. Since the position did not improve during that period, the management desired to continue the same arrangement, but the workers did not agree for

the same. The management therefore carried on the work for one more month with 6 days work in a week. Since there was no improvement in the sale of goods and since the production also suffered in spite of six days' work in a week, the management decided to lay-off certain workers from 10 January 1968. The workers however agreed to have 5 days work in a week with one extra holiday without wages, but the management did not agree to this arrangement on account of accumulation of finished goods and fall in production.

As regards the discontinuance of interim relief, it was represented by the management that they had given certain advances to the workers which would be adjusted towards the interim relief to be paid to the workers during November and December 1967. Further on account of financial difficulties due to recession the management discontinued the payment of interim relief from 1st January 1968. The Conciliation Officer made efforts to bring a settlement, but it ended in failure. He therefore, recommended to Government to refer the dispute for adjudication. Government accepting the recommendation of the Lobour Officer and the Commissioner of Labour, referred on 24-2-1968 the two issues *viz.*, lay-off of the workers and stoppage of interim relief for adjudication to the Labour Court, Hubli. Orders were also issued to prohibit the continuance of the strike by the workers on 24-2-1968, It has now been reported that the strike by the workers bas been called off and the workers have resumed duty from 1st March 1968 and further that the Labour situatution in the factory is normal.

Members' Representation

ಶ್ರೀ ಜಿ. ಎ. ಆಂಜನಪ್ಪ (ಪದವೀಧರರ ಕ್ಷೇತ್ರ).—ಒಂದು ವಿಷಯ ನಭೆಯ ಗಮನಕ್ಕೆ ತರುತ್ತೇನೆ. ಈ ನಭೆಯ ನದಸ್ಯರು ಮತ್ತು ಮಾನ್ಯ ನಚಿವರೂ ಆಗಿರುವ ಶ್ರೀಮಾನ್ ನಾಡಗೌಡರ ಬಗ್ಗೆ ನಾಕಷ್ಟು ಚರ್ಚೆ ನಡೆದಿದೆ. ಇದರ ಬಗ್ಗೆ ಟೀಕೆ ಆಗಿದೆ. ಕೆಳ ಮನೆಯಲ್ಲಿ ಮೇಲ್ಮನೆಯ ನದಸ್ಯರ ಬಗ್ಗೆ ಯಾವ ವಿಧವಾದ ಕ್ರಮ ತೆಗೆದುಕೊಳ್ಳಲು ಬರುವುದಿಲ್ಲ. ಆದುದರಿಂದ ನಭಾಪತಿಗಳಿಗೆ ಈ ಬಗ್ಗೆ ಇರತಕ್ಕ ಎಲ್ಲ ರಿಕಾರ್ಡ್ಸ್ ಕಳಿನುತ್ತಾರೆ ಎಂದು ಪೇಪರುಗಳಲ್ಲಿ ವರದಿ ಬಂದಿದೆ. ಪೇಪರ್ ವರದಿ ಪ್ರಕಾರ ಮಾನ್ಯ ನಭಾಪತಿಗಳವರ ಗಮನಕ್ಕೆ ವಿಷಯ ತಂದಿದ್ದಾರೆಯೇ ಅವರು ಏನು ಕೇಳಿದ್ದಾರೆ ? ಈ ವಿಚಾರ ನಾನು ತಿಳಿಯಲು ಅಪೇಕ್ಷೆ ಪಡುತ್ತೇನೆ.

ನಭಾಪತಿಯವರು.—ಕೆಳ ಮನೆಯ ಉಪಾಧ್ಯಕ್ಷರು ಅವರ ರೂಲಿಂಗ್ ಕಾಪಿ ಒಂದು ಕಳಿನಿದ್ದಾರೆ. ಬೇರೆ ಯಾವ ಕಾಗದ ಪತ್ರವೂ ನನಗೆ ಬಂದಿಲ್ಲ.

Sri M. C. NARASIMHAN.—The point that arises for consideration is the relationship between the two Houses, and the remarks said to have been made by the hon. Minister for Co-operation in this House, reflecting on the way in which the proceedings took place in the Lower House; and particularly in that statement, it was almost suggested that the Opposition there edopted an obstructionist attitude to the passage of work. It was rather unfortunate. Is it not better that you use your good offices and see that some conventions are reached in this behalf? Normally, there is a rule so far as the Lower House is concerned that no reference should

(SRI M. C. NARASIMHAN)

be made to the proceedings of this House. I don't think that we have such specific rules so far as our House is concerned. Is it not better that we think of having a ruling in regard to this matter so that there is no reference to the remarks made in the other House leading to misunderstanding; or somebody does not say what cannot be stated in that House or what is it that is proper which could be said here?

Sri J. B. MALLARADHYA (Legislative Assembly Constituency).—It is too early to discuss this matter till the proceedings of the other House are received. We know the contemporary practice in the other Houses of Legislature in India is very clear. So, at this stage I do not wish to mention anything more. There should be harmonious relationship between both the Houses. I think we have a convention so far as this House also is concerned. The Houses of Legislature have a convention. After the proceedings are received, we can think whether any rule should be framed or whether any decision should be taken in this behalf.

Sri M. C. NARASIMHAN.—My suggestion was misunderstood. After all, it relates to the proceedings of this House. And it is a reflection on the proceedings of the other House. To this extent, we alone are concerned; we are more concerned, though that House is concerned with it and a ruling has been given. We are really concerned with it in this House.

ಶ್ರೀ ಜಿ. ವಿ. ಅಂಜನಪ್ಪ.—ಇದರಲ್ಲಿ ಎರಡು ವಿಚಾರ ಇವೆ. ಮಾನ್ಯ ಸಚಿವರಾದ ಶ್ರೀ ನಾಡ ಗೌಡರು ಮೇಲ್ಮನೆಯ ಸದಸ್ಯರು. ಅವರ ಹಕ್ಕುಬಾಧ್ಯತೆಗಳು ಇಲ್ಲಿ ಅಡಕವಾಗಿದೆ. ಇನ್ನೊಂದು ವಿಚಾರ ಏನು ಅಂದರೆ, ಅವರು ಸಹಕಾರದ ಮಂತ್ರಿಗಳು. ಆ ಸಭೆಗೆ ಅವರು ಮಂತ್ರಿಗಳಾಗಿ ಜವಾಬ್ದಾರರಾಗಿದ್ದಾರೆ. ಅವರು ಈ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದರ ಬಗ್ಗೆ ಈ ಸಭೆಯಲ್ಲಿ ಕ್ರಮ ತೆಗೆದುಕೊಳ್ಳಲ ಎಂದು ನೂಚಿಸಲು ಇಷ್ಟಪಡುತ್ತೇನೆ. ಇದು ಸಭಾಪತಿಗಳಿಗೆ ಸೇರಿದೆ. ಆದರೆ ಈ ಸಭೆಯ ಹಕ್ಕುಬಾಧ್ಯತೆಗಳನ್ನು ಕೆಳ ಮನೆಯಲ್ಲಿ ಪ್ರಶ್ನೆ ಮಾಡಬಹುದೇ? ಅವರು ಇಲ್ಲಿ ಅದನ್ನು ಹೇಳಿದ್ದಾರೆ. ಇಲ್ಲಿ ಚರ್ಚೆ ಮಾಡುವ ಅಧಿಕಾರ ಇದೆ. ಅವರು ಸದಸ್ಯರಾಗಿ ಮಾತನಾಡಿದ್ದರೆ ಕ್ರಮ ಏನು ಬೇಕಾದರೂ ತೆಗೆದುಕೊಳ್ಳಬಹುದು. ಈ ಸಭೆಯ ಹಕ್ಕುಬಾಧ್ಯತೆ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೋ ಇಲ್ಲವೋ ಇದರ ಬಗ್ಗೆ ತಮ್ಮದು ಏನು ಅಭಿಪ್ರಾಯ?

Sri M. C. NARASIMHAN.—It does not matter. There is nothing wrong. I accept the criticism.

Sri J. B. MALLARADHYA.—I am criticising myself, assuming that we have allowed it by default and this House should be concerned with it.

Mr. CHAIRMAN.—I have already stated that I have not received any papers. Till those papers are received, it will be premature to discuss all these points. With regard to my position on that day I have made it clear. The hon. Minister wanted only the co-operation of the House and the House has accepted that position on that day. And nobody has objected to it.

ಶ್ರೀ ಜಿ. ವಿ. ಅಂಜನಪ್ಪ.—ಅಂದು ನಾನು ಆಕ್ಷೇಪಣೆ ಮಾಡಿದೆ.

Mr. CHAIRMAN.—That has been clarified and the House has accepted that position that day. Even that I am told has been discussed in the other House. After I receive the whole proceedings, I will just look into that matter.

ಶ್ರೀ ಜಿ. ವಿ. ಆಂಜನಪ್ಪ.—ಇನ್ನೊಂದು ವಿಜ್ಞಾಪನೆ. ಈ ಸಭೆ ಪ್ರಾರಂಭವಾಗಿ ಈಗಾಗಲೇ ಹದಿನೈದು ದಿವಸವಾಯಿತು. ನಾನು 16 ಪ್ರಶ್ನೆಗಳನ್ನು ಕಳಿಸಿದ್ದೇನೆ. ಕಳೆದ ಸೆಷನ್ನಿನಲ್ಲಿ ಕೇಳಿದ ಒಂದು ಪ್ರಶ್ನೆಗೆ ಉತ್ತರ ಬಂದಿದೆ. ಇನ್ನೊಂದು ಪ್ರಶ್ನೆಗೆ ಉತ್ತರ ಬಂದಿದೆ. ನನ್ನ ಬಾಕಿ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಆದರೆ ಬಾಕಿ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರಗಳು ಬರುತ್ತಿವೆ. ನಾನು ವಿರೋಧ ಪಕ್ಷದ ಸದಸ್ಯ, ನಾನು ಸರಕಾರವನ್ನು ಟೀಕೆ ಮಾಡುತ್ತೇನೆ ಎಂದು ನನ್ನ ಪ್ರಶ್ನೆಗಳನ್ನು ತಡೆಹಿಡಿದಿದಲಾಗಿದೆಯೇ ? ನನ್ನ ಪ್ರಶ್ನೆಗಳಿಗೆ ಉತ್ತರ ಕೊಡಲು ಸರಕಾರ ಏಕೆ ಹಿಂಜರಿಯುತ್ತದೆ ಅದಕ್ಕೆ ಕಾರಣ ಏನು ? ಇದರಿಂದ ಸದಸ್ಯರ ಹಕ್ಕಿಗೆ ಚ್ಯುತಿ ಬಂದ ಹಾಗೆ ಆಗಿದೆ. ಇದರ ಬಗ್ಗೆ ತಾವು ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕು. ತಮ್ಮ ಕೈಯಲ್ಲಿ ಇದು ಆಗುವುದಿಲ್ಲ ಎಂದು ಹೇಳುವುದಾದರೆ ನಾವು ಪ್ರಶ್ನೆ ಕೇಳುವುದನ್ನೇ ಕೈ ಬಿಡುತ್ತೇವೆ. ತಾವು ತಮ್ಮ ಹಕ್ಕನ್ನು ಉಪಯೋಗಿಸಿಕೊಂಡು ತಮ್ಮ ಅಧಿಕಾರವನ್ನು ಚಲಾಯಿಸಿ ಇದನ್ನು ಸರಕಾರದ ಗಮನಕ್ಕೆ ತರಬೇಕು. ಸರಕಾರ ಇದಕ್ಕೆ ಗಮನ ಕೊಡುವುದಿಲ್ಲ ಎಂದು ತುಂಬಾ ವಿಷಾದದಿಂದ ಹೇಳ ಬೇಕಾಗಿದೆ. ಇದಕ್ಕೆ ಕ್ರಮ ದಯವಿಟ್ಟು ತೆಗೆದುಕೊಳ್ಳಬೇಕು.

ಶ್ರೀ ಕೆ. ವಿ. ಶಂಕರಗೌಡ.—ಮಾನ್ಯ ಸದಸ್ಯರು ಹೇಳಿದ ಹಾಗೆ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಟ್ಟು ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡಬಾರದು ಎಂದು ಅಭಿಪ್ರಾಯ ಸರಕಾರಕ್ಕೆ ಇಲ್ಲ. ಎಲ್ಲ ಸದಸ್ಯರನ್ನೂ ಸಮಾನ ಭಾವನೆಯಿಂದ ಕಾಣುತ್ತೇವೆ. ಸರಕಾರ ಹಾಗೆ ಮಾಡುತ್ತದೆ. ಕೆಲವು ಪ್ರಶ್ನೆಗಳಿಗೆ ಉತ್ತರ ಒದಗಿಸಲು ಹೆಚ್ಚಿನ ವಿಷಯ ಸಂಗ್ರಹಿಸಲು ಕೆಲವು ಸಮಯ ಬೇಕಾಗುತ್ತದೆ. ತೀವ್ರ ಉತ್ತರಗಳನ್ನು ಒದಗಿಸಬೇಕೆಂದು ಮಂತ್ರಿಗಳಿಗೆ ಪ್ರಾರ್ಥನೆ ಮಾಡಿಕೊಂಡಿದೆ. ಆದಷ್ಟು ಜಾಗ್ರತೆ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಡಬೇಕು ಎಂದು ತಿಳಿಸಿದೆ. ಅವರು ಪ್ರಯತ್ನ ಮಾಡುತ್ತಿದ್ದಾರೆ. ಆದಷ್ಟೂ ಜಾಗ್ರತೆ ಉತ್ತರಗಳು ಬರುತ್ತವೆ ಎಂದು ನಿರೀಕ್ಷಣೆ ಮಾಡುತ್ತಿದ್ದೇವೆ.

ಶ್ರೀ ವಿ. ಶ್ರೀನಿವಾಸ ಶೆಟ್ಟಿ (ಪದವೀಧರರ ಕ್ಷೇತ್ರ).—ಡಿಸ್ಟ್ರಿಕ್ಟ್‌ನಿಂದ ಹೊರಗಡೆಯಿಂದ ಪ್ರಶ್ನೆಗಳಿಗೆ ಉತ್ತರದ ವಿವರ ಬರಬೇಕಾದರೆ ಸಮಯ ಹಿಡಿಯಬಹುದು. ಆದರೆ ಸೆಕ್ರೆಟೇರಿಯಟ್ಟಿನಲ್ಲಿ ಇಲ್ಲಿಯೇ ಉತ್ತರ ಬರಬೇಕಾದರೆ ಅಂಥ ಪ್ರಶ್ನೆಗಳಿಗೂ ಉತ್ತರ ಏತಕ್ಕೆ ಕೊಡುವುದಿಲ್ಲ ? ಇದಕ್ಕೆ ಕಾರಣವೇನು ? ಸೆಕ್ರೆಟೇರಿಯೇಟ್ ಮಟ್ಟದಲ್ಲಿ ಉತ್ತರ ಬರುವುದಕ್ಕೆ ಸಾಧ್ಯವಿದ್ದರೂ ಅಂಥ ಪ್ರಶ್ನೆಗಳಿಗೂ ಉತ್ತರ ಬರುವುದಿಲ್ಲ. ಇನ್ನೊಂದು ವರ್ಷ ಸಮಯ ಆಗಬಹುದು. ಇಲ್ಲಿಯೇ ಉತ್ತರ ದೊರೆಯುವ ಹಾಗೆ ಇದ್ದರೆ ಆದಷ್ಟು ಬೇಗನೆ ಏತಕ್ಕೆ ಉತ್ತರ ಕಳಿಸಬಾರದು ?

ಸಭಾಪತಿಯವರು.—ಮಾನ್ಯ ಸದಸ್ಯರು ತಮ್ಮ ಪ್ರಶ್ನೆಗಳಿಗೆ ಮಾತ್ರ ಉತ್ತರ ಬರುವುದಿಲ್ಲ ಎಂದು ಹೇಳುವುದಕ್ಕೆ ಕಾರಣವಿಲ್ಲ. ಸಾಕಷ್ಟು ಪ್ರಶ್ನೆಗಳಿಗೆ ಉತ್ತರಗಳು ಬರುತ್ತಿವೆ. There is much improvement. Apart from Call Attention and all those things, we are getting aswers to at least six questions per day. 'ಇದು ನಿಮ್ಮ ಕೈಯಲ್ಲಿ ಆಗುವುದಿಲ್ಲ ಎಂದರೆ ನಾವು ಪ್ರಶ್ನೆ ಕೇಳುವುದನ್ನೇ ಕೈ ಬಿಡುತ್ತೇವೆ' ಎಂದು ಮಾನ್ಯ ಸದಸ್ಯರು ಚೇರ್ ಮೇಲೆ ಆಪಾದನೆ ಮಾಡುವುದು ಸರಿಯಲ್ಲ. ಈ ರೀತಿ ಹೇಳುವುದು ಸರಿಯಲ್ಲ. I am sorry for this statement.

ಶ್ರೀ ಜಿ. ವಿ. ಆಂಜನಪ್ಪ.—ತಪ್ಪು ತಿಳಿದುಕೊಳ್ಳಬಾರದು. ಸಭಾಪತಿಯವರಿಗೆ ಅಗೌರವ ತೋರಿಸಬೇಕು ಎಂದು ನನಗೆ ಉದ್ದೇಶವಿಲ್ಲ. ನಾನು ತಪ್ಪು ಹೇಳಿದ್ದರೆ ಅದಕ್ಕೆ ವಿಷಾದ ಪಡುತ್ತೇನೆ. ತಾವು ಎಷ್ಟೋ ಸಾರಿ ಸರಕಾರಕ್ಕೆ ಆದೇಶ ಕೊಟ್ಟಿದ್ದೀರಿ. ಆ ರೀತಿ ನಾನು ಹೇಳಿದ್ದರೆ ವಿಷಾದಿಸುತ್ತೇನೆ. ತಮಗೆ ಶಕ್ತಿ ಇಲ್ಲ, ಸಾಮರ್ಥ್ಯವಿಲ್ಲ ಎಂದು ಅರ್ಥ ಬರುವ ಪದ ಉಪಯೋಗಿಸಿದ್ದರೆ ದಯಮಾಡಿ ಕ್ಷಮಿಸಬೇಕು. ಬೆಳಗಾಂ ಜಿಲ್ಲೆಯಿಂದ ಮಾಹಿತಿ ತರಿಸುವುದಾದರೆ ಕಾರಾತೀತವಾಗುತ್ತದೆ. ಸೆಕ್ರಟೇರಿಯೆಟ್ ಮಟ್ಟದಲ್ಲಿ ವಿವರ ದೊರೆಯುವ ಪ್ರಶ್ನೆಗಳಿವೆ. ಮಂತ್ರಿಗಳ ಪ್ರಯಾಣದ ಭತ್ಯದ ಬಗ್ಗೆ ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಒದಗಿಸಲು 15 ದಿವಸ ಏತಕ್ಕೆ ಬೇಕು ? ಕೆಳ ಮನೆಯಲ್ಲಿ ಪ್ರಶ್ನೆಗಳಿಗೆ ಉತ್ತರಗಳು ಬಂದಿವೆ. ಆದುದರಿಂದ ತಾವು ಸ್ವಲ್ಪ ಬಿಗಿ ಆಗಬೇಕು. ನಮ್ಮ ಸಭಾಪತಿಯವರು ಅವರು ಬಹಳ ಔದಾರ್ಯ ತೋರುತ್ತಾರೆ ಎಂದು ಈ ದೃಷ್ಟಿಯಿಂದ ಎಷ್ಟೋ ಸಾರಿ ಸರಿಯಾಗಿ ಕೆಲಸ ಮಾಡುವುದಿಲ್ಲ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಬಜೆಟ್ ಅಧಿವೇಶನದಲ್ಲಿ ಬರತಕ್ಕಂಥ ಎಲ್ಲ ಪ್ರಶ್ನೆಗಳಿಗೆ ಸಂಪೂರ್ಣವಾಗಿ ಉತ್ತರ ಬರಬೇಕು. ತಿಂಗಳಗಟ್ಟಲೆ ಪ್ರಶ್ನೆಗಳಿಗೆ ಉತ್ತರಗಳು ಬರದೇ ಇದ್ದರೆ ನಾವು ಕೇಳುವ ಪ್ರಶ್ನೆಗಳು ವ್ಯರ್ಥವಾಗಿ ರ್ಯಾಪ್ಸ್ ಆಗುತ್ತವೆ. ಎಷ್ಟೋ ಪ್ರಶ್ನೆಗಳು ಸರಕಾರದ ಹತ್ತಿರ ಇವೆ. ನನ್ನ ಖಚಿತ ಅಭಿಪ್ರಾಯ ಏನು ಅಂದರೆ ಸರಕಾರ ಕೆಲವು ವಿಷಯಗಳನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತಿದೆ. ಏಕೆಂದರೆ ಸಚಿವಾಲಯದಲ್ಲಿ ಉತ್ತರ ಸಿಕ್ಕುವಂಥ ವಿಷಯಗಳನ್ನೂ ಕೇಳಿದ್ದೇವೆ. 24 ಗಂಟೆಗಳಲ್ಲಿ ಉತ್ತರಗಳನ್ನು ಕಳಿಸುವುದಕ್ಕೆ ಸಾಧ್ಯವಾಗುತ್ತದೆ. ಹೀಗಿದ್ದರೂ ಅವರು ಉತ್ತರಗಳನ್ನು ಕಳಿಸದೆ ಇರುವುದಕ್ಕೆ ಕಾರಣವೇನು? ಇದರ ಬಗ್ಗೆ ತಾವು ಸ್ವಲ್ಪ ವಿಚಾರ ಮಾಡಿ ಸರ್ಕಾರಕ್ಕೆ ಸರಿಯಾಗಿ ಹೇಳಬೇಕು. ಸಭೆಯ ನಿಯಮಗಳನ್ನು ಬೇಕಾಗಿದ್ದರೆ ಸ್ವಲ್ಪ ತಿದ್ದುಪಡಿ ಮಾಡುವುದಕ್ಕೆ ಪ್ರಯತ್ನ ಮಾಡೋಣ. ಸರ್ಕಾರಕ್ಕೆ ಚಾಟಿ ಏಟು ಕೊಡದೆ ಇದ್ದರೆ ಏನೂ ನಡೆಯುವುದಿಲ್ಲ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ. ತಾವು ನಮಗೆ ರಕ್ಷಣೆ ಕೊಡಬೇಕು.

ಶ್ರೀ ವಿ. ಶ್ರೀನಿವಾಸ ಶೆಟ್ಟಿ.—ರೂಲ್ಸ್ ಮಾಡುವಾಗ ಸರ್ಕಾರದಿಂದ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಸ್ವಲ್ಪ ಸಮಯ ಕೊಡಬೇಕು. ಆಗಲೂ ಉತ್ತರಗಳು ಬರದೆ ಇದ್ದರೆ ಆ ಬಗ್ಗೆ ಇಲ್ಲಿ ಕೇಳಬಹುದು. ಇದಕ್ಕೆ ಯಾರೂ ಏನೂ ಮಾಡುವ ಹಾಗೆ ಇಲ್ಲ. ಆದ್ದರಿಂದ ತಾವು ತಮ್ಮ ಅಧಿಕಾರವನ್ನು ಉಪಯೋಗಿಸಿಕೊಂಡರೆ ಸರ್ಕಾರ ಕಣ್ಣು ತೆರೆಯುವುದಕ್ಕೆ ಅವಕಾಶವಾಗುತ್ತದೆ. ನನ್ನ ಅನುಭವದ ಪ್ರಕಾರ ಐದಾರು ವರ್ಷಗಳಿಂದ ಈಗೆಯೇ ಪ್ರತಿಯೊಬ್ಬ ಸಭಾಪತಿಯವರೂ ಹೇಳುತ್ತಿದ್ದಾರೆ. ಕಳೆದ ಅಧಿವೇಶನಕ್ಕಿಂತ ಪರಿಸ್ಥಿತಿ ಸ್ವಲ್ಪ ಉತ್ತಮವಾಗಿದೆ, ಒಂದೆರಡು ಪ್ರಶ್ನೆಗಳು ಹೆಚ್ಚಾಗಿ ಬರುತ್ತಿವೆ ಎಂದು ತಾವು ಹೇಳಿದಿರಿ. ಆದರೂ ಕೂಡ ತಾವು ತಮ್ಮ ಅಧಿಕಾರವನ್ನು ಸ್ವಲ್ಪಮಟ್ಟಿಗೆ ಉಪಯೋಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

10-00 A.M.

ಶ್ರೀ ಜೆ. ಬಿ. ಮುರ್ಳಾರಾಧ್ಯ.—ಎಷ್ಟು ಪ್ರಶ್ನೆಗಳಿಗೆ ನಿಯಮಿತ ಕಾಲದಲ್ಲಿ ಉತ್ತರಗಳನ್ನು ಒದಗಿಸಿದ್ದಾರೆ, ಎಷ್ಟು ಪ್ರಶ್ನೆಗಳಿಗೆ ಕಾರಾವಕಾಶ ಬೇಕು ಎಂದು ಸರ್ಕಾರದವರು ಕೇಳಿಕೊಂಡಿದ್ದಾರೆ ಎನ್ನುವ ವರ್ತಮಾನವನ್ನು ಕೊಡುವುದಕ್ಕೆ ಸಾಧ್ಯವೇ ಸ್ವಾಮಿ? ನಮ್ಮ ರೂಲ್ಸ್‌ನಲ್ಲಿ ಯಾವುದಾದರೂ ಬಲವತ್ತರವಾದ ಕಾರಣದಿಂದ ಕೆಲವು ಪ್ರಶ್ನೆಗಳಿಗೆ ಸರ್ಕಾರದವರು ನಿಯಮಿತವಾದ ಕಾಲದಲ್ಲಿ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ ಅದನ್ನು ಸಭಾಪತಿಯವರಿಗೆ ತಿಳಿಸಿ ಹೆಚ್ಚು ಕಾರಾವಕಾಶ ಬೇಕು ಎಂದು ಕೇಳುವುದಕ್ಕೆ ಅವಕಾಶವಿದೆ.

Mr. CHAIRMAN.—200 questions have been received out of which 58 have been answered; 142 have to be received yet. I am trying to bring it to the notice of the Government that they should try to expedite the matter.

Sri J. B. MALLARADHYA.—The point is, the rules provide that if the answer could not be supplied by Government, they should write to the Chairman and ask for time. Have they done it in any case?

Mr. CHAIRMAN.—So far as I am aware there is no provision in the rule. Even then I will impress upon the Government that the matter should be expedited.

ಶ್ರೀ ವಿ. ವೆಂಕಟಪ್ಪ.—ರೂಲ್ಸ್ ಮಾಡುವಾಗ ಒಂದು ಸೂಚನೆ ಏನು ಮಾಡಿದೆವು ಎಂದರೆ,—ಅದನ್ನು ಅಳವಡಿಸಿಲ್ಲ, ಅದನ್ನು ಸರ್ಕಾರದವರು ಒಪ್ಪಿಕೊಂಡಿದ್ದರು— ಎಷ್ಟು ಪ್ರಶ್ನೆಗಳು ಬರುತ್ತವೆ, ಎಷ್ಟು ದಿನ ಅಧಿವೇಶನ ನಡೆಯುತ್ತದೆ ಎಂದು ನೋಡಿಕೊಂಡು ಅಧಿವೇಶನ ನಡೆಯುವ ದಿನಗಳಿಗೆ ಬಂದಿರುವ ಪ್ರಶ್ನೆಗಳನ್ನು ಹಂಚಿ ಸ್ವಲ್ಪ ಹೆಚ್ಚು ಕಡಮೆ ಒಂದೊಂದು ದಿವಸಕ್ಕೆ ಅಷ್ಟು ಪ್ರಶ್ನೆ ಬರಬೇಕು ಎಂದು ಮಾಡಿದೆವು. ಈಗ ಆ ರೀತಿ ಮಾಡುತ್ತಿಲ್ಲ. 200 ಪ್ರಶ್ನೆಗಳು ಬಂದಿರುವುದರಲ್ಲಿ 15 ದಿನಗಳಿಗೆ 58 ಪ್ರಶ್ನೆಗಳು ಬಂದರೆ ಏನು ಪ್ರಯೋಜನ?

ಶ್ರೀ ಎಂ. ವಿ. ವೆಂಕಟಪ್ಪ (ಪದವೀಧರರ ಕ್ಷೇತ್ರ).—ಪ್ರೊಸೀಜರ್‌ನಲ್ಲಿ ಸ್ವಲ್ಪ ತಪ್ಪಿದೆ ಎಂದು ನನಗೆ ಅನ್ನಿಸುತ್ತದೆ. ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಗಳಿಗೆ ಪ್ರಶ್ನೆಗಳನ್ನು ಕಳಿಸಲಾ

ಗುತ್ತದೆ. ಅದು ಇರಾಖೆಗೆ ಹೋಗುವುದರಲ್ಲಿ ನಿಧಾನವಾಗುತ್ತದೆ. ಅದಕ್ಕೋಸ್ಕರ ಜವಾನರ ಮೂಲಕ ಸರ್ಕಾರದ ಇರಾಖೆಗೆ ನೇರವಾಗಿ ಹೋಗುವಂತೆ ಪ್ರಶ್ನೆಗಳನ್ನು ಕಳಿಸಿದರೆ ಇನ್ನೂ ಸ್ವಲ್ಪ ಬೇಗ ಉತ್ತರಗಳು ಬರಬರುದು ಎಂದು ನನಗನ್ನಿಸುತ್ತದೆ.

Mr. CHAIRMAN.—I refer to rule 38 (2). This is the only rule and I do not think there is any time limit prescribed. Even then I assure the House that I will try to expedite the matter.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಬಡ್ಜೆಟ್ ಮೇಲಿನ ಚರ್ಚೆ ಇನ್ನೂ ಎಷ್ಟು ದಿವಸ, ನಡೆಯುತ್ತದೆ. ಈ ಅಧಿವೇಶನ ನಡೆಯುವುದು ಇನ್ನು ಎಷ್ಟು ದಿವಸ ಈ ವಿಚಾರಗಳನ್ನು ನಭೆಗೆ ತಿಳಿಸಿದರೆ ಒಳ್ಳೆಯದು.

ಶ್ರೀ ಕೆ. ಎ. ಶಂಕರಗೌಡ.—ಬಡ್ಜೆಟ್ ಮೇಲಿನ ಚರ್ಚೆ ಸೋಮವಾರ, ಮಂಗಳವಾರ ನಡೆಯುತ್ತದೆ. ಬುಧವಾರ ಅಪ್ರೊಪ್ರಿಯೇಷನ್ ಬಿಲ್ (ವೋಟ್ ಆನ್ ಅಕೌಂಟ್) ಬರುತ್ತದೆ, ಗುರುವಾರ ಖಾನಗಿ ಕಾರ್ಯಕಲಾಪಗಳಿರುತ್ತವೆ, ಶುಕ್ರವಾರ ನಪ್ಲಿಮೆಂಟರಿ ಗ್ರಾಂಟ್ಸ್ ಮೇಲೆ ಚರ್ಚೆ ನಡೆಯುತ್ತದೆ, ಶನಿವಾರ ಅಪ್ರೊಪ್ರಿಯೇಷನ್ ಮೇಲೆ ಚರ್ಚೆ ನಡೆಯುತ್ತದೆ. ಆದ್ದರಿಂದ ಶನಿವಾರದವರೆಗೂ ನಭೆ ನಡೆಯುತ್ತದೆಂದು ಹೇಳಬಹುದು.

Mr. CHAIRMAN.—The House will now rise and meet at 10-35.

The House rose at Five Minutes past Ten of the Clock to re-assemble at Thirty-five Minutes past Ten of the Clock.

The House re-assembled at Forty Minutes past Ten of the Clock.

[MR. DEPUTY CHAIRMAN in the Chair]

BUDGET ESTIMATES FOR 1968-69

(General Discussion)

Debate Contd.

† ಶ್ರೀ ಕೆ. ಕಾಂತಪ್ಪ ಶೆಟ್ಟಿ (ವಿಧಾನಸಭಾ ಕ್ಷೇತ್ರ).—ಮಾನ್ಯ ನಭಾಪತಿಗಳೇ, ನಮ್ಮ ಆರ್ಥ ನಚಿವರು ನಮ್ಮ ರಾಜ್ಯದ ಹಣಕಾಸಿನ ವಿಷಯದಲ್ಲಿ ಒಂದು ವಾಸ್ತವಿಕ ಚಿತ್ರವನ್ನಿಟ್ಟಿದ್ದಾರೆ. ನಮ್ಮ ವಿರೋಧ ಪಕ್ಷದವರು ಅಂಕಿಸಂಖ್ಯೆಗಳಲ್ಲೇನೋ ಜಗ್ಗರಿಮಾಡಿದ್ದಾರೆಂದು ಹೇಳಿದ್ದಾರೆ. ಅಂಥ ಜಾದೂಗಿರಿದು ಏನೂ ಇಲ್ಲ, ವಾಸ್ತವವಾಗಿ 1962 ರಿಂದ 5 ವರ್ಷ ರಾಜ್ಯದ ಮತ್ತು ದೇಶದ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಸಾಮಾನ್ಯವಾಗಿ ನಿರೂಪಿಸಿ, ಇನ್ನುಮುಂದೆ ರಾಜ್ಯದ ಹಣ ಕಾಸಿನ ಪರಿಸ್ಥಿತಿ ಮತ್ತು ಸಾಂಪತ್ತಿಕ ಸ್ಥಿತಿ ಸುಧಾರಿಸುತ್ತದೆ ಎಂಬ ಚಿಹ್ನೆ ತೋರಿಬರುತ್ತಿದೆ ಎಂಬ ಆಶಾವಾದವನ್ನು ವ್ಯಕ್ತಪಡಿಸಿದ್ದಾರೆ. ಬೇರೆಯವರ ವಿಷಯದಲ್ಲಾದರೂ ಏನಾದರೂ ಜಾದು ಮಾಡಬಹುದು, ಮುಚ್ಚುಮರೆ ಮಾಡಬಹುದು ಎಂದು ಆರೋಪಿಸಬಹುದು ; ಆದರೆ ಶ್ರೀ ಹೆಗಡೆ ಯವರ ವಿಷಯದಲ್ಲಿ ಅಂಥಾದ್ದನ್ನು ಹೇಳುವುದಕ್ಕೆ ಬರುವುದಿಲ್ಲ. ಅವರು ಪೊದಲನೆಯದಾಗಿ ಮದ್ಯಪಾನ ನಿಷೇಧವನ್ನು ತೆಗೆದುಹಾಕಿ ವಾಸ್ತವಿಕ ದೃಷ್ಟಿಯನ್ನು ಧೈರ್ಯಮಾಡಿ ಯಾವವಿಧವಾದ ಮುಚ್ಚುಮರೆಯಿಲ್ಲದೆ ಸ್ಪಷ್ಟವಾಗಿ ಹೇಳುವವರು, ಅದರಂತೆ ಹೇಳಿದ್ದಾರೆ ಎಂಬುದು ನನ್ನ ಅಭಿ ಪ್ರಾಯ. ಅವರು ಯಾವ ವಿಷಯವನ್ನೂ ತಮ್ಮ ಭಾಷಣದಲ್ಲಿ ಮುಚ್ಚುಮರೆಯಿಲ್ಲದೆ ತಿಳಿಸಿದ್ದಾರೆ. ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ, ನಾವು ಎದುರಿಸಬೇಕಾದ ಸಂಕಟ, ನಮ್ಮ ಆದಳಿತವೆರ್ಚಾ ಗುವ ವಿಳಂಬ ಮುಂತಾದ್ದನ್ನೆಲ್ಲಾ ಚೆನ್ನಾಗಿ ಮನಗಂಡು ಅದನ್ನು ತಕ್ಕಮಟ್ಟಿಗೆ ಸ್ಪಷ್ಟವಾಗಿ ತಮ್ಮ ಭಾಷಣದಲ್ಲಿ ಸೂಚಿಸಿದ್ದಾರೆಂದು ಹೇಳಬಹುದು. 5 ವರ್ಷಗಳಲ್ಲಿ ಇದುವರೆಗೆ ದೇಶ ಮತ್ತು ರಾಜ್ಯ ಕಷ್ಟ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಇನ್ನು ಮುಂದೆ ವಿರೋಧ ಪಕ್ಷದ ಸದಸ್ಯರಾದ